**OS: 62/2023**
**D.W-1**

**ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಕೂಡ್ಲಿಗಿ**

ದಿನಾಂಕಃ 13.11.2025 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲು ವಾದಿ ಪರ ವಕೀಲರಿಂದ**

ಈ ದಾವೆಯಲ್ಲಿ ತಕರಾರು ಸಲ್ಲಿಸಲು ನಮ್ಮ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ನನಗೆ ಸ್ವಂತ ಮಕ್ಕಳು ಇರುವುದಿಲ್ಲ. ತಿಲಕಪ್ಪನ ಮಗಳ ಸೌಭಾಗ್ಯ ಯಾವ ಶಾಲೆಯಲ್ಲಿ ಓದಿದ್ದಾರೆ ಎಂಬುದರ ಬಗ್ಗೆ ನನಗೆ ಮಾಹಿತಿ ಇಲ್ಲ. ತಿಲಕಪ್ಪ ನನ್ನ ಗಂಡ ಎಂದು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿದ್ದೇನೆ ಎಂದರೆ ಸರಿ. ಈ ಬಗ್ಗೆ ಯಾವುದಾದರು ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದಿರಾ ಎಂದರೆ ಇಲ್ಲ. ನಾನು ತಿಲಕಪ್ಪನ ಜೊತೆ ಸಂಸಾರ ಮಾಡಿದ್ದೇನೆ ಎಂಬುದಕ್ಕೆ ಸಂಬಂಧಿಸಿದಂತೆ ದಾಖಲೆ ಇದೆಯಾ ಎಂದರೆ ದಾಖಲೆ ಇವೆ ಅವುಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ರೇಣುಕಮ್ಮ ಮತ್ತು ತಿಲಕಪ್ಪ ಮದುವೆಯಾದ ಬಗ್ಗೆ ನನಗೆ ಮಾಹಿತಿ ಇಲ್ಲ. 43 ವರ್ಷಗಳ ಹಿಂದೆ ರೇಣುಕಮ್ಮ ಮತ್ತು ತಿಲಕಪ್ಪರವರು ಮದುವೆಯಾಗಿರುತ್ತಾರೆ ಎಂದರೆ ಸರಿಯಲ್ಲ. ತಿಲಕಪ್ಪನ ಮನೆ ಕೊಟ್ಟೂರಿನ 3 ನೇ ವಾರ್ಡ್ ನಲ್ಲಿ ಬರುತ್ತದೆ. ನನ್ನ ಮನೆ 8 ನೇ ವಾರ್ಡ್ ನಲ್ಲಿ ಬರುತ್ತದೆ. ರೇಣುಕಮ್ಮನ ಮನೆ ಎಲ್ಲಿ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ರೇಣುಕಮ್ಮನ ಮನೆ 3 ನೇ ವಾರ್ಡ್ ನಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ತಿಲಕಪ್ಪ ಮತ್ತು ರೇಣುಕಮ್ಮರವರಿಗೆ ಸೌಭಾಗ್ಯ ಎನ್ನುವ ಮಗಳು ಜನಿಸಿದ್ದಳು ಎಂದರೆ ಸರಿ.

ತಿಲಕಪ್ಪ ಮತ್ತು ರೇಣುಕಮ್ಮ ಒಟ್ಟಿಗೆ ಜೀವನ ನಡೆಸುತ್ತಿದ್ದರಿಂದ ಅವರಿಗೆ ನಿ.ಪಿ 4 ರಂತೆ ಪಡಿತರ ಚೀಟಿ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತಿಲಕಪ್ಪರವರು ರೇಣುಕಮ್ಮ ಹೆಸರಿಗೆ ನಿ.ಪಿ 5 ಮತ್ತು 6 ರಂತೆ ಜೀವ ವಿಮಾ ಪಾಲಿಸಿ ಮಾಡಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಿಃ 29.07.2016 ರಂದು ತಿಲಕಪ್ಪನವರು ಬಿ.ಡಿ.ಸಿ.ಸಿ ಬ್ಯಾಂಕ್ ಕೊಟ್ಟೂರಿನಲ್ಲಿ ರೇಣುಕಮ್ಮನ ಹೆಸರಿನಲ್ಲಿ ಉಳಿತಾಯ ಖಾತೆ ತೆರೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪಾಸ್ ಬುಕ್ ನಲ್ಲಿ ತಿಲಕಪ್ಪನ ಹೆಂಡತಿಯ ಹೆಸರು ರೇಣುಕಮ್ಮ ಎಂದು ಇದೆ ಎಂದರೆ ಸರಿಯಲ್ಲ.

ನನ್ನ ಹೆಸರಿನಲ್ಲಿ ಆಧಾರ್ ಕಾರ್ಡ್ ಇದೆ ಅದನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಆ ರೀತಿ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ನಿ.ಪಿ 2 ಮತ್ತು 3 ರಂತೆ ರೇಣುಕಮ್ಮನ ಆಧಾರ್ ಕಾರ್ಡ್ ಮತ್ತು ಚುನಾವಣೆ ಗುರುತಿನ ಚೀಟಿಯಲ್ಲಿ ಆಕೆಯ ಗಂಡನ ಹೆಸರು ತಿಲಕಪ್ಪ ಎಂದು ಇದೆ ಎಂದರೆ ನನಗೆ ಗೊತ್ತಿಲ್ಲ. ನಿ.ಪಿ 8 ರಿಂದ 13 ರ ದಾಖಲೆಗಳಲ್ಲಿ 2 ನೇ ವಾದಿಯ ತಂದೆಯ ಹೆಸರು ತಿಲಕಪ್ಪ ಎಂದು ಇದೆ ಎಂದರೆ ನನಗೆ ಗೊತ್ತಿಲ್ಲ.

ದಿಃ 01.06.2018 ರಂದು ಸರ್ವೆ ನಂಃ 23 ಬಿ ಆಸ್ತಿಯನ್ನು ಪಿ. ತಿಲಕಪ್ಪನವರು ಪೂಜಾರ್ ಕರಣ್ ಕುಮಾರ್ ರವರಿಗೆ ಮಾರಾಟ ಮಾಡಿದ್ದು ಸದರಿ ದಾಖಲೆಯು ನಿ.ಪಿ 14 ಎಂದು ಗುರುತಿಸಲಾಗಿದ್ದು ಅದರಲ್ಲಿ ರೇಣುಕಮ್ಮ ಗಂಡ ತಿಲಕಪ್ಪರವರು ಸಾಕ್ಷಿಯಾಗಿ ಸಹಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ನಿ.ಡಿ 2 ರ ದಾಖಲೆಯು ದೇವದಾಸಿ ಪುನರ್ ವಸತಿ ದಾಖಲೆಯನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಪಡೆದು ಸಲ್ಲಿಸಿದ್ದೇನೆ ಎಂದರೆ ಸರಿ. ನಾನು ದೇವದಾಸಿ ಆಗಿದ್ದರಿಂದ ಆ ದಾಖಲೆಯನ್ನು ತಂದು ಹಾಜರುಪಡಿಸಿರುತ್ತೇನೆ.

(ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ).

**ಓ,ಹೇ,ಕೇ,ಸರಿ ಇದೆ.**

**ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ಕೂಡ್ಲಿಗಿ.**